ಮಾಡಬೇಕು ಅಷ್ಟೆ'' ಅಂದು ಕಾರು ಹತ್ತಿದರು.

ನಿರ್ಮಲ ಮನೆಗೆ ಬಂದ ಮೇಲೆ ತನ್ನ ಕೆಲಸಕ್ಕೆ ರೂಮಿಗೆ ಹೋದವಳು ಮತ್ತೆ ಸರಕ್ಕಂತ ಹೊರಗೆ ಬಂದು "ಇವತ್ತು 25ನೇ ವಾರ್ಷಿಕೋತ್ಸವ ಗೊತ್ತಾ ನಿಂಗೆ" ಅಂದಳು. ಮಗಳ ಮುಖ ನೋಡಿ "ನಿನಗೆ 25 ವರ್ಷ ಆಗಿ ಒಂದು ವಾರ ಆಗಿದೆ, ನಾನು ಈ ಮನೆ ಕಟ್ಟಿ ಇನ್ನೂ 25 ವರ್ಷ ಆಗಿಲ್ಲ, ಹೀಗಿರುವಾಗ ಯಾವುದರದು 25ನೇ ವಾರ್ಷಿಕೋತ್ಸವ" ಅಂದರು. ಅವಳು ನಕ್ಕು ತಂದೆಯ ಬಳಿ ನಿಂತು ಬೋಡು ತಲೆಯನ್ನು ಸವರುತ್ತಾ "ನಾವಿಬ್ಬರೂ ರೈಲ್ವೇ ಸ್ಟೇಷನ್ನಿಗೆ ಹೋಗೋಕೆ ಶುರು ಮಾಡಿ ಇವತ್ತಿಗೆ ಸರಿಯಾಗಿ 25 ವರ್ಷ. ಒಂದು ವಾರದ ಮಗುವಾಗಿನಿಂದ ನಿನ್ನನ್ನು ರೈಲ್ವೇ ಸ್ಟೇಷನ್ನಿಗೆ ಕರ್ಕೊಂಡು ಹೋಗ್ತಿದೀನಿ ಅಂತ ನೀನೇ ಅಂದಿದ್ಯಲ್ಲ" ಅಂದಳು. ಗುರಪ್ಪನಿಗೂ ನಗು ಬಂತು. "ಹೌದಮ್ಮ ನೀನು ಒಂದು ವಾರದ ಮಗುವೋ ಒಂದು ತಿಂಗಳ ಮಗುವೋ ನನಗೆ ನೆನಪಿಲ್ಲ. ಅವಾಗಿಂದ ರೈಲ್ವೇ ಸ್ಟೇಷನ್ನಿಗೆ ಬರೋದು ಆ ರೈಲನ್ನು ನೋಡೋದು ಮತ್ತೆ ವಾಪಸ್ ಬರೋದು ಮಾಡ್ತಿದೀನಿ" ಅಂದರು. ನಿರ್ಮಲ ತಂದೆಯನ್ನೇ ನೋಡ್ತಾ "ಇಷ್ಟು ವರ್ಷ ಆದರೂ ನೀನು ಯಾಕೆ ರೈಲ್ವೇ ಸ್ಟೇಷನ್ನಿಗೆ ಹೋಗ್ತಿದೀಯ, ನನ್ನನ್ನೂ ಯಾಕೆ ಕರ್ಕೊಂಡು ಹೋಗ್ತಾ ಇದೀಯ ಅಂತ ನನಗೆ ಹೇಳ್ಲಿಲ್ಲ. ಆದರೆ ನೀನು ಹೇಳದೇ ಹೋದರೂ ನನಗೇ ಗೊತ್ತಾಯ್ತು" ಅಂದಳು. ಗುರಪ್ಪ ಮಗಳ ಕಡೆ ನೋಡಿದರು. ಒಂದು ಸಾರಿ ನಡುಗಿದರು. ಬೆವರೊರೆಸಿಕೊಂಡರು. "ಏನಮ್ಮ ನೀನು ಹೇಳ್ತಿರೋದು. ಏನು ಗೊತ್ತು ನಿನಗೆ, ಯಾರು ಏನು ಹೇಳಿದರು" ಅಂತ ತಡವರಿಸಿದರು. ನಿರ್ಮಲ ತಂದೆಯ ಮುಖನೇ ನೋಡ್ತಾ "ಇವತ್ತಾದರೂ ನಿಜ ಹೇಳು" ಅಂದಳು. ಸ್ವಲ್ಪ ಹೊತ್ತು ಅವರಿಬ್ಬರ ನಡುವೆ ಮೌನ. ಈ ವಿಷಯ ಅಲ್ಲಿಗೇ ಮುಕ್ತಾಯವಾಯಿತು. ಈ ವಿಷಯ ಪ್ರಸ್ತಾಪವಾಗಿ ಅರ್ಧಕ್ಕೇ ತುಂಡಾಗುತ್ತಿರುವುದು ಇದೇ ಮೊದಲೇನಲ್ಲ. ತಂದೆ ಯಾಕೆ ರೈಲ್ವೇ ಸ್ಟೇಷನ್ನಿಗೆ ಹೋಗ್ತಾರೆ, ನನ್ನನ್ನೂ ಯಾಕೆ ಕರ್ಕೊಂಡು ಹೋಗ್ತಾರೆ ಅನ್ನೋದು ಅವಳಿಗೆ ಸೋಜಿಗವಾಗೇ ಉಳಿದಿದೆ.

ಆಫೀಸ್‌ನಿಂದ ನಿರ್ಮಲಳ ಗಂಡ ಮುರುಳಿ ಬಂದ. ನಿರ್ಮಲ ಅವನಿಗೆ ಕಾಫಿ ತಂದುಕೊಟ್ಟಳು. ಅವನು ಹೆಂಡತಿ ಮತ್ತು ಮಾವ ಇಬ್ಬರ ಮುಖವನ್ನೂ ನೋಡುತ್ತಾ "ಇವತ್ತೂ ರೈಲ್ವೇ ಸ್ಟೇಷನ್ನಿಗೆ ಹೋಗಿದ್ರಾ" ಅಂತ ಕೇಳಿದ. ಗುರಪ್ಪ ಅಳಿಯನ ಮುಖ ನೋಡಿ "ಏನ್ ಅಳಿಯಂದಿರೇ, ನೀವೂ ತಮಾಷೆ ಮಾಡೋ ಹಾಗಾಗಿ ಹೋದ್ರಲ್ಲ" ಅಂದರು. ನಿರ್ಮಲ "ಇಲ್ನೋಡಿ ಸೂರ್ಯ ಉದಯಿಸುವ, ಅಸ್ತಮಿಸುವ ದಿಕ್ಕು ಬದಲಾಗಬಹುದು, ಋತುಗಳು ಬದಲಾಗಬಹುದು ಆದರೆ ಅಪ್ಪ ರೈಲ್ವೇ ಸ್ಟೇಷನ್ನಿಗೆ ಹೋಗೋದು, ನನ್ನನ್ನೂ ಕರ್ಕೊಂಡು ಹೋಗೋದು ತಪ್ಪಲ್ಲ. ಇವತ್ತು ನಾನೇ ಅವರಿಗೆ ನೆನೆಪು ಮಾಡಿದೆ. ಇಲ್ಲದೇ ಹೋಗಿದ್ರೆ ರೈಲು ಬಂದು ಹೊರಟೇ ಹೋಗಿರೋದು" ಅಂದಳು. ಮುರುಳಿ ಹೆಂಡತಿಯ ಹತ್ತಿರ ಹೋಗಿ "ನಿಮ್ಮ ಮಾವ ರೈಲ್ವೇ ಸ್ಟೇಷನ್ನಿಗೆ ಹೋಗೋದರ ಹಿಂದಿನ ರಹಸ್ಯ ಅವರಾಗಿಯೇ ಬಾಯಿ ಬಿಡೋ ತನಕ ನೀನಾಗಲೀ ನಾನಾಗಲೀ ಕೆಣಕೋದು ಬೇಡ. ಅವರಿಗೆ ಹೇಳ್ಬೇಕು ಅಂತ ಅನಿಸಿದ ದಿನ ಅವರೇ ಬಾಯಿಬಿಟ್ಟು ಹೇಳ್ತಾರೆ. ನಾವು ಒತ್ತಾಯ ಮಾಡೋದು, ಹೀಗಿರಬಹುದು, ಹಾಗಿರಬಹುದು ಅಂತ ಊಹಿಸಿ ಅವರ ಮನಸ್ಸಿಗೆ ನೋವು ಮಾಡೋದು ಬೇಡ" ಅಂದ.

ಆದರೆ ಇದರಲ್ಲೇನಿದೆ ರಹಸ್ಯ ಅಂತ ನಿರ್ಮಲ ಅನೇಕ ದಿನ ಕೇಳಿದ ಪ್ರಶ್ನೆಗೆ ಗುರಪ್ಪ ಯಾವತ್ತೂ ನೇರ ಉತ್ತರ ಕೊಟ್ಟಿಲ್ಲ. ಸರೀಪ್ಪ, ಹೋಗ್ಲಿ ನಂಗೆ ಅಜ್ಜಿ ಇದಾರಾ, ಅತ್ತೆ ಇದಾರಾ ಅಂತೆಲ್ಲ ಕೇಳಿದ ಪ್ರಶ್ನೆಗಳಿಗೂ ಉತ್ತರವಿಲ್ಲ. ಅಜ್ಜಿ ಮನೆಯವರು ಅಂತ ಯಾರೋ ಬಂದಿದ್ದಾಗ